**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ–೧೧ ಪಿ.ಡಬ್ಲ್ಯೂ-೬

| | | |
|---|---|---|
| ಹೆಸರು | ಃ | ಶಂಕರ |
| ತಂದೆಃಗಂಡ | ಃ | ಶಿವಶರಣಪ್ಪ |
| ವಯಸ್ಸು | ಃ | ೪೨ ವರ್ಷ |
| ಉದ್ಯೋಗ | : | ಎಲೆಕ್ಟ್ರಿಕಲ್ ಕೆಲಸ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ೧೯.೦೫.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-೧ ರಿಂದ ೯, ೧೧ ರಿಂದ ೧೫ ರವರ ಪರಿಚಯ ಇರುತ್ತದೆ. ದಿಃ೦೩.೦೫.೨೦೧೭ ರಂದು ಶ್ರೀ ಶಾಂತಲಿಗೇಶ್ವರ ಗುಡಿಯ ಹತ್ತಿರ ನಾನು ಕೂತಿದ್ದಾಗ ಚಾಸಾ-೧ ರವರು ಬಂದು ನನ್ನ ತಮ್ಮಂದಿರಿಗೆ ಅಪಘಾತವಾಗಿದೆ ಸ್ವಲ್ಪ ಬನ್ನಿ ಎಂದು ಕರೆದರು. ನಾವು ಹೋಗಿ ನೋಡಿದಾಗ ಶ್ರೀಶೈಲ ಸ್ಥಳದಲ್ಲೆ ಮೃತಪಟ್ಟಿದ್ದನು ಶಿವಾನಂದ ಎಂಬುವವನಿಗೆ ಗಾಯಗಳಾಗಿದ್ದವು. ಅವರಿಬ್ಬರಿಗೂ ಅಂಬ್ಯುಲೆನ್ಸನಲ್ಲಿ ಕಳುಹಿಸಿಕೊಟ್ಟೆವು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಶ್ರೀಶೈಲ ಹಾಗೂ ಶಿವಾನಂದ ರವರು ಮೋಟಾರ ವಾಹನ ನಂ.ಕೆಎ-32 ಇಬಿ-3268 ರಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಎನಡಿಪಿ ಪೇಟ್ರೊಲ ಬಂಕ ಖೋಡಿಯಾಳ ಕ್ರಾಸ ಹತ್ತಿರ ಕಾರ ಸಂಖ್ಯೆ ಕೆಎ-32 ಜಿ-6448 ರ ಚಾಲಕ ಕಾರನ್ನು ಅತೀವೆಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅವರಿಬ್ಬರಿಗೆ ಡಿಕ್ಕಿಪಡಿಸಿದ ಕಾರಣ ಶ್ರೀಶೈಲ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಿಃ12.05.2017 ರಂದು ಸಿಪಿಐ ರವರು ನಮ್ಮನ್ನು ಕರೆಸಿದ್ದರು ಎಂದರೆ ಸರಿ. ಶ್ರೀಶೈಲ ಹಾಗೂ ಶಿವಾನಂದರವರಿಗೆ ಅಪಘಾತಪಡಿಸಿದ ವ್ಯಕ್ತಿಯನ್ನು ತೋರಿಸಿ ಅವನ ಹೆಸರು ರಾಘವೇಂದ್ರ ಎಂದರೆ ಸರಿ. ದಿ.14.05.2017 ರಂದು ಆಳಂದ ವೃತ್ತ ಕಚೇರಿಗೆ ಕರೆಸಿದ್ದರು ಎಂದರೆ ಸರಿ. ದಿ.13.05.2017 ರಂದು ಶಿವಾನಂದರವರು ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದ.**

ನಾನು ಅಪಘಾತವನ್ನು ಕಣ್ಣಾರೆ ನೋಡಿದ್ದಿನಾ ಎಂದರೆ ಸಾಕ್ಷಿಯು ಅಪಘಾತವಾದ ನಂತರ ನಾನು ಅಲ್ಲಿ ಹೋಗಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ಆಳಂದ ಕಲಬುರಗಿ ರಸ್ತೆ ಉತ್ತರ – ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಡಬಲ್ ರೋಡ ಇದೆ ಎಂದರೆ ಸರಿ. ನಾವು 4 ಜನ ಘಟನಾ ಸ್ಥಳಕ್ಕೆ ಹೊದೆವು. ನಾವು ಅಲ್ಲಿ ಹೊದಾಗ ಕಾರ ಪಲ್ಟಿಯಾಗಿತ್ತು ಎಂದರೆ ಸರಿ. ಆರೋಪಿ ರಾಘವೇಂದ್ರರವರಿಗೂ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಕಾರ ಚಾಲಕ ಅಲ್ಲಿ ಇದ್ದ ಎಂದರೆ ಸರಿ. ಆರೋಪಿ ಬಂದು ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ದಿ.12.05.2017 ರಂದು ಪೋಲಿಸರು ಘಟನಾ ಸ್ಥಳಕ್ಕೆ ಕರೆಸಿದ್ದರು. ಆರೋಪಿಯನ್ನು ಹೊರತು ಆ ದಿನ ಇನ್ನೂ ಎಷ್ಟು ಜನ ಇದ್ದರು ನನಗೆ ನೆನಪಿಲ್ಲ. ಪೋಲಿಸರು ಹೇಳಿದ ನಂತರವೆ ಆರೋಪಿಯ ಹೆಸರು ರಾಘವೇಂದ್ರ ಎಂದು ನನಗೆ ಗೊತ್ತಾಯಿತು ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ನನಗೆ ಮೊದಲೆ ಗೊತ್ತಿತ್ತು ಎಂದು ಹೇಳುತ್ತಾರೆ. ಪೋಲಿಸರು ನನ್ನನ್ನು ಕರೆಸಿದಾಗ ಪೋಲಿಸರು ಮಾತನಾಡುತ್ತಿರುವುದು ಕೇಳಿ ನನಗೆ ಗೊತ್ತಾಯಿತು. ಪೋಲಿಸರು ಕರೆಯಿಸಿ ನನಗೆ ಆರೋಪಿಯನ್ನು ತೋರಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನನ್ನ ಹೇಳಿಕೆಯನ್ನು ಠಾಣೆಯಲ್ಲಿ ತೆಗೆದುಕೊಂಡರು. ನನ್ನ ಹೇಳಿಕೆಯನ್ನು ಲಿಖಿತ ರೂಪದಲ್ಲಿ ಬರೆದುಕೊಂಡರು.

ಚಾಸಾ-15 ನಮ್ಮ ಊರಿನವರು ಎಂದರೆ ಸರಿ. ಅವರು ಕಲಬುರಗಿಯಲ್ಲಿ ವಕೀಲರು ಎಂದರೆ ಸರಿ. ಚಾಸಾ-15 ರವರೆ ದೂರು ನೀಡುವುದಾಗಲಿ ಚಾಸಾ-1 ರವರು ಅಣ್ಣ-ತಮ್ಮಂದಿರನ್ನು ಆಸ್ಪತ್ರೆಗೆ ಕರೆದುಕೊಂಡು ಹೊಗುವುದಾಗಲಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಗಳ ಪರಿಹಾರ ಧನವನ್ನು ಚಾಸಾ-15 ರವರ ಮುಖಾಂತರ ಕೊಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಅವರು ತಮ್ಮಂದಿರು ತೀರಿಕೊಂಡ ಪರಿಹಾರ ಧನ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಶ್ರೀಶೈಲ ಹಾಗೂ ಶಿವಾನಂದ ರವರಿಗೆ ಮೋಟಾರ ವಾಹನ ಚಲಾಯಿಸಲು ಲೈಸೆನ್ಸ ಇತ್ತು ಎಂದು ಗೊತ್ತು ಆದರೆ ನಾನು ನೋಡಿರುವುದಿಲ್ಲ. ಶ್ರೀಶೈಲ ಹಾಗೂ ಶಿವಾನಂದ ರವರ ವಾಹನ ದಾಖಲೆಗಳು ಇಲ್ಲದೆ ಇರುವ ಕಾರಣ ಆರೋಪಿಯ ವಾಹನದ ದಾಖಲೆಗಳು ಸರಿಯಾಗಿದ್ದ ಕಾರಣ ಅವನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಅಪಘಾತ ಆರೋಪಿಯ ತಪ್ಪಿನಿಂದಲ್ಲದೆ ಶ್ರೀಶೈಲ ಹಾಗೂ ಶಿವಾನಂದರವರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ ಅಲ್ಲ.

ಶ್ರೀಶೈಲ ಹಾಗೂ ಶಿವಾನಂದ ರವರು ಮೋಟಾರ ವಾಹನ ನಂ.ಕೆಎ-32 ಇಬಿ-3268 ರಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಎನಡಿಪಿ ಪೇಟ್ರೊಲ ಬಂಕ ಖೋಡಿಯಾಳ ಕ್ರಾಸ ಹತ್ತಿರ ಕಾರ ಸಂಖ್ಯೆ ಕೆಎ-32 ಜಿ-6448 ರ ಚಾಲಕ ಕಾರನ್ನು ಅತೀವೆಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅವರಿಬ್ಬರಿಗೆ ಡಿಕ್ಕಿಪಡಿಸಿದ ಕಾರಣ ಶ್ರೀಶೈಲ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ದಿಃ12.05.2017 ರಂದು ಸಿಪಿಐ ರವರು ನಮ್ಮನ್ನು ಕರೆಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಶ್ರೀಶೈಲ ಹಾಗೂ ಶಿವಾನಂದರವರಿಗೆ ಅಪಘಾತಪಡಿಸಿದ ವ್ಯಕ್ತಿಯನ್ನು ತೋರಿಸಿ ಅವನ ಹೆಸರು ರಾಘವೇಂದ್ರ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ದಿ.14.05.2017 ರಂದು ಆಳಂದ ವೃತ್ತ ಕಚೇರಿಗೆ ಕರೆಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.. ದಿ.13.05.2017 ರಂದು ಶಿವಾನಂದರವರು ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ